**C**

**CCE PF**
**CCE PR**
**NSR & NSPR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, 560 003**

**KARNATAKA SECONDARY EDUCATION EXAMINATION BOARD, MALLESHWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2022**

**S.S.L.C. EXAMINATION, MARCH / APRIL, 2022**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 11. 04. 2022 ] **ಸಂಕೇತ ಸಂಖ್ಯೆ : 98-K**

Date : 11. 04. 2022 ] **CODE NO. : 98-K**

## ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

## Subject : CARNATIC MUSIC / HINDUSTANI MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh & Private Repeater / NSR & NSPR)**

**(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)**

**( Candidate has to answer either Carnatic Music or Hindustani Music )**

**[ ಗರಿಷ್ಠ ಅಂಕಗಳು : 50**

**[ Max. Marks : 50**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **(ಕರ್ನಾಟಕ ಸಂಗೀತ)** | |
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 10 × 1 = 10 | |
| 1. | ಕರ್ನಾಟಕ ಸಂಗೀತಕ್ಕಿರುವ ಇನ್ನೊಂದು ಹೆಸರು<br>(A) ಉತ್ತರಾದಿ ಸಂಗೀತ (B) ಸುಗಮ ಸಂಗೀತ<br>(C) ದಕ್ಷಿಣಾದಿ ಸಂಗೀತ (D) ಲಘು ಸಂಗೀತ<br>***ಉತ್ತರ :*** (C) ದಕ್ಷಿಣಾದಿ ಸಂಗೀತ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | 'ಸ' (ಷಡ್ಜ) ಸ್ವರವು ಒಂದು ಪ್ರಕೃತಿ ಸ್ವರ, ಏಕೆಂದರೆ, ಆ ಸ್ವರವು<br>(A) ಬದಲಾವಣೆ ಹೊಂದುತ್ತದೆ (B) ಬದಲಾವಣೆ ಹೊಂದುವುದಿಲ್ಲ<br>(C) ಅನುಸ್ವರವಾಗಿದೆ (D) ಸ್ಥಾಯಿಯನ್ನು ಹೊಂದಿಲ್ಲ<br>***ಉತ್ತರ :*** (B) ಬದಲಾವಣೆ ಹೊಂದುವುದಿಲ್ಲ | 1 |
| 3. | ತಿಶ್ರ ಜಾತಿ ತ್ರಿಪುಟ ತಾಳದಲ್ಲಿನ ಒಂದು ಆವರ್ತದಲ್ಲಿರುವ ಅಕ್ಷರಗಳ ಸಂಖ್ಯೆ<br>(A) 4 (B) 5<br>(C) 9 (D) 7<br>***ಉತ್ತರ :*** (D) 7 | 1 |
| 4. | 'ಮಾಯಾಮಾಳವಗೌಳ' ರಾಗವನ್ನು ಸಂಪೂರ್ಣ ರಾಗವೆಂದು ಕರೆಯುವರು. ಕಾರಣ ಈ ರಾಗದ ಆರೋಹಣ ಮತ್ತು ಅವರೋಹಣಗಳಲ್ಲಿ<br>(A) ಏಳು–ಏಳು ಸ್ವರಗಳಿವೆ (B) ಆರು–ಆರು ಸ್ವರಗಳಿವೆ<br>(C) ಐದು–ಐದು ಸ್ವರಗಳಿವೆ (D) ಶುದ್ಧ ಸ್ವರಗಳಿವೆ<br>***ಉತ್ತರ :*** (A) ಏಳು–ಏಳು ಸ್ವರಗಳಿವೆ | 1 |
| 5. | ಚತುರಶ್ರಜಾತಿ ಏಕತಾಳದ ಒಂದು ಆವರ್ತದಲ್ಲಿ ನಾಲ್ಕು ಅಕ್ಷರಗಳಿವೆ. ಏಕೆಂದರೆ, ಈ ತಾಳದ ಲಘುವಿನಲ್ಲಿ<br>(A) ಮೂರು ಅಕ್ಷರಗಳಿವೆ (B) ನಾಲ್ಕು ಅಕ್ಷರಗಳಿವೆ<br>(C) ಐದು ಅಕ್ಷರಗಳಿವೆ (D) ಏಳು ಅಕ್ಷರಗಳಿವೆ<br>***ಉತ್ತರ :*** (B) ನಾಲ್ಕು ಅಕ್ಷರಗಳಿವೆ | 1 |
| 6. | ಬಸವಣ್ಣನವರ ಜನ್ಮಸ್ಥಳ<br>(A) ಬಾಡ (B) ಭಾಗಮಂಡಲ<br>(C) ಬಾಗೇವಾಡಿ (D) ಬಂಕಾಪುರ<br>***ಉತ್ತರ :*** (C) ಬಾಗೇವಾಡಿ | 1 |
| 7. | 'ತಂಬೂರಿ' ಒಂದು<br>(A) ಶೃತಿ ವಾದ್ಯ (B) ತಾಳ ವಾದ್ಯ<br>(C) ಘನ ವಾದ್ಯ (D) ಸುಷಿರ ವಾದ್ಯ<br>***ಉತ್ತರ :*** (A) ಶೃತಿ ವಾದ್ಯ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಅಕ್ಕಮಹಾದೇವಿಯು ತನ್ನ ಪತಿಯನ್ನು ತ್ಯಜಿಸಿದಳು. ಏಕೆಂದರೆ, ಆಕೆಯ ಪತಿಯು<br>(A) ಷರತ್ತುಗಳನ್ನು ಮುರಿದನು<br>(B) ಆಕೆಯ ಮೇಲೆ ಕೋಪಗೊಂಡನು<br>(C) ಆಕೆಯನ್ನು ಬಳಹಷ್ಟುಬಾರಿ ನಿರ್ಲಕ್ಷಿಸುತ್ತಿದ್ದನು<br>(D) ಸೋಮಾರಿಯಾಗಿದ್ದನು<br>***ಉತ್ತರ :*** (A) ಷರತ್ತುಗಳನ್ನು ಮುರಿದನು | 1 |
| 9. | ಹಿಂದೂಸ್ಥಾನಿ ಪದ್ಧತಿಯ ಒಂದು ಸ್ಥಾಯಿಯಲ್ಲಿ ಹನ್ನೆರಡು ಸ್ವರಗಳಿದ್ದರೆ, ಕರ್ನಾಟಕ ಸಂಗೀತ ಪದ್ಧತಿಯ ಒಂದು ಸ್ಥಾಯಿಯಲ್ಲಿ<br>(A) ಹದಿನೆಂಟು ಸ್ವರಗಳಿವೆ (B) ಹನ್ನೆರಡು ಸ್ವರಗಳಿವೆ<br>(C) ಸ್ವರಗಳಿಲ್ಲ (D) ಹದಿನಾರು ಸ್ವರಗಳಿವೆ<br>***ಉತ್ತರ :*** (D) ಹದಿನಾರು ಸ್ವರಗಳಿವೆ | 1 |
| 10. | ಧೀರಶಂಕರಾಭರಣ ಮತ್ತು ಮೇಚಕಲ್ಯಾಣಿ ರಾಗಗಳ ನಡುವಿನ ವ್ಯತ್ಯಾಸಕ್ಕೆ ಕಾರಣವಾದ ಸ್ವರವೆಂದರೆ<br>(A) ಗಾಂಧಾರ (B) ಮಧ್ಯಮ<br>(C) ದೈವತ (D) ನಿಷಾದ<br>***ಉತ್ತರ :*** (B) ಮಧ್ಯಮ | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $10 \times 1 = 10$ | |
| 11. | ಆರೋಹಣವೆಂದರೇನು ?<br>***ಉತ್ತರ :***<br>ಸ್ವರಗಳ ಕ್ರಮವಾದ ಏರುವಿಕೆಯನ್ನು 'ಆರೋಹಣ' ಎನ್ನುವರು.<br>*ಉದಾ. :* ಸ ರಿ ಗ ಮ ಪ ದ ನಿ ಸ̇ | 1 |
| 12. | ಮೇಚಕಲ್ಯಾಣಿ ರಾಗದ ಮೇಳಕರ್ತ ಸಂಖ್ಯೆಯನ್ನು ಬರೆಯಿರಿ.<br>***ಉತ್ತರ :***<br>65 | 1 |
| 13. | ಕರ್ನಾಟಕ ಸಂಗೀತದ ಮೋಹನ ರಾಗವನ್ನು ಹಿಂದೂಸ್ಥಾನಿ ಪದ್ಧತಿಯಲ್ಲಿ ಯಾವ ಹೆಸರಿನಿಂದ ಕರೆಯುವರು ?<br>***ಉತ್ತರ :***<br>ಭೂಪ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

14. ಕಾಂಭೋಜಿ ರಾಗವನ್ನು ಭಾಷಾಂಗ ರಾಗವೆಂದು ಕರೆಯಲು ಕಾರಣವೇನು ?

***ಉತ್ತರ :***

ಕಾಂಭೋಜಿ ರಾಗವು ಅನ್ಯಸ್ವರ ಹೊಂದಿರುವುದರಿಂದ ಇದನ್ನು ಭಾಷಾಂಗ ರಾಗವೆನ್ನುವರು.

ಅನ್ಯಸ್ವರ – ನಿ$_3$ (ಕಾಕಲಿ ನಿಷಾದ) 1

15. ಧ್ರುವತಾಳ ಮತ್ತು ಮಠ್ಯತಾಳಗಳ ನಡುವಿನ ಯಾವುದಾದರೂ ಒಂದು ವ್ಯತ್ಯಾಸವನ್ನು ಬರೆಯಿರಿ.

***ಉತ್ತರ :***

| ಧ್ರುವತಾಳ | ಮಠ್ಯತಾಳ |
|---|---|
| ತಾಳಾಂಗ : 1 ಲಘು 1 ದ್ರುತ 2 ಲಘು | ತಾಳಾಂಗ : 1 ಲಘು 1 ದ್ರುತ 1 ಲಘು |
| ಚಿಹ್ನೆ : \|O\|\| | ಚಿಹ್ನೆ : \|O\| |
| ಮೂರು ಲಘುಗಳನ್ನು ಹೊಂದಿದೆ | ಎರಡು ಲಘುಗಳನ್ನು ಹೊಂದಿದೆ |

(ಯಾವುದಾದರೂ ಒಂದು ವ್ಯತ್ಯಾಸವನ್ನು ಪರಿಗಣಿಸುವುದು) 1

16. ಕನಕದಾಸರ ತಂದೆ–ತಾಯಿಯರ ಹೆಸರೇನು ?

***ಉತ್ತರ :***

ಕನಕದಾಸರ ತಂದೆ : ಬೀರೇಗೌಡ

ತಾಯಿ : ಬಚ್ಚಮ್ಮ 1

17. ಖಂಡಜಾತಿ ಅಟತಾಳದ ಒಂದು ಆವರ್ತದಲ್ಲಿ ಎಷ್ಟು ಅಕ್ಷರಗಳಿವೆ ?

***ಉತ್ತರ :***

ಖಂಡಜಾತಿ ಅಟತಾಳದ ಒಂದು ಆವರ್ತದಲ್ಲಿ ಹದಿನಾಲ್ಕು ಅಕ್ಷರಗಳಿವೆ.

ತಾಳಾಂಗ : 2 ಲಘು 2 ದ್ರುತ

$5 + 5 + 2 + 2 = 14$ 1

18. ವಸಂತರಾಗವನ್ನು ವಕ್ರರಾಗವೆಂದು ಕರೆಯಲು ಕಾರಣವೇನು ?

***ಉತ್ತರ :***

ವಸಂತರಾಗವು ಆರೋಹಣದಲ್ಲಿ ವಕ್ರಸಂಚಾರವನ್ನು ಹೊಂದಿರುವುದರಿಂದ ಆ ರಾಗವನ್ನು ವಕ್ರರಾಗವೆನ್ನುವರು.

ಆರೋಹಣ : ಸ ಮ ಗ ಮ ದ ನಿ ಸ 1

19. ಕರ್ನಾಟಕ ಸಂಗೀತ ಪದ್ಧತಿಯ ಪ್ರಮುಖ ತಾಳವಾದ್ಯ ಯಾವುದು ?

***ಉತ್ತರ :***

ಕರ್ನಾಟಕ ಸಂಗೀತ ಪದ್ಧತಿಯ ಪ್ರಮುಖ ತಾಳವಾದ್ಯ 'ಮೃದಂಗ'. 1

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಆದಿತಾಳದ ತಾಳಾಂಗಗಳನ್ನು ಬರೆಯಿರಿ.<br>***ಉತ್ತರ :***<br>ಆದಿತಾಳ ತಾಳಾಂಗ : 1 ಲಘು 2 ದ್ರುತ<br>ಚಿಹ್ನೆ : ।OO | 1 |
| III. | **ಈ ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ :** $9 \times 2 = 18$ | |
| 21. | ಮಾರ್ಗ ಹಾಗೂ ದೇಶೀ ಸಂಗೀತಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.<br>***ಉತ್ತರ :*** | |

| ***ಮಾರ್ಗ ಸಂಗೀತ*** | ***ದೇಶೀ ಸಂಗೀತ*** |
|---|---|
| ಇಂದು ಬಳಕೆಯಲ್ಲಿಲ್ಲದ ದೇವಗಾನವೇ ಮಾರ್ಗ ಸಂಗೀತ. | ಆಯಾ ದೇಶಗಳಲ್ಲಿ ವಾಡಿಕೆಯಲ್ಲಿರುವ ಸಂಗೀತವೇ ದೇಶೀ ಸಂಗೀತ. |

2

22. ಕರ್ನಾಟಕ ಸಂಗೀತ ಪದ್ಧತಿ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.

***ಉತ್ತರ :***

| ***ಕರ್ನಾಟಕ ಸಂಗೀತ*** | ***ಹಿಂದೂಸ್ಥಾನಿ ಸಂಗೀತ*** |
|---|---|
| 1. ಒಂದು ಸ್ಥಾಯಿಯಲ್ಲಿ ಹದಿನಾರು ಸ್ವರಗಳಿವೆ. | 1. ಒಂದು ಸ್ಥಾಯಿಯಲ್ಲಿ ಹನ್ನೆರಡು ಸ್ವರಗಳಿವೆ. |
| 2. ಸುಳಾದಿ ಸಪ್ತತಾಳಗಳು ರೂಢಿಯಲ್ಲಿವೆ. | 2. ತ್ರಿತಾಲ್, ಚೌತಾಲ್, ಝುಪ್‌ತಾಲ್ ಮುಂತಾದ ತಾಳಗಳು ಬಳಕೆಯಲ್ಲಿವೆ. |
| 3. ತಾಳಗಳನ್ನು ಕ್ರಿಯೆಯ ಮೂಲಕ ತೋರಿಸಲಾಗುತ್ತದೆ. | 3. ತಾಳಗಳನ್ನು ತಬಲದ ಮೂಲಕ ತೋರಿಸಲಾಗುತ್ತದೆ. |
| 4. ಗೀತೆ, ಜತಿಸ್ವರ, ವರ್ಣ, ಕೃತಿ, ಜಾವಳಿ ಮುಂತಾದ ರಚನೆಗಳಿವೆ. | 4. ದ್ರುಪದ್, ಧಮಾರ್, ತರಾನ, ಖ್ಯಾಲ್, ಟಪ್ಪ, ಭಜನ್ ಮುಂತಾದ ರಚನೆಗಳಿವೆ. |
| 5. ವೀಣೆ, ಕೊಳಲು, ನಾದಸ್ವರ, ಮೃದಂಗ, ಘಟ ಮುಂತಾದ ವಾದ್ಯಗಳ ಬಳಕೆಯಿದೆ. | 5. ಸಿತಾರ್, ಬಿನ್, ಸರೋದ್, ದಿಲ್ರೂಬ, ಸಾರಂಗಿ, ಸಂತೂರ್, ತಬಲ, ಪಕವಾಜ್ ಮುಂತಾದ ವಾದ್ಯಗಳ ಬಳಕೆಯಿದೆ. |

(ಯಾವುದಾದರೂ ಎರಡು ವ್ಯತ್ಯಾಸಗಳನ್ನು ಪರಿಗಣಿಸುವುದು) 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | ಮಿಶ್ರಜಾತಿ ಝುಂಪೆತಾಳದ ಒಂದು ಆವರ್ತದಲ್ಲಿನ ಅಕ್ಷರಗಳ ಸಂಖ್ಯೆ 10. ಏಕೆ ?<br>***ಉತ್ತರ :***<br>ಮಿಶ್ರಜಾತಿ ಝುಂಪೆತಾಳದ ಒಂದು ಆವರ್ತದ ಅಕ್ಷರಗಳ ಸಂಖ್ಯೆ 10. ಏಕೆಂದರೆ ಆ ತಾಳದ ಲಘುವು (ಮಿಶ್ರಜಾತಿಯದ್ದಾಗಿರುವುದರಿಂದ) 7 ಅಕ್ಷರಗಳನ್ನು ಹೊಂದಿದೆ.<br>ಮಿಶ್ರಜಾತಿ ಝುಂಪೆತಾಳ<br>= 1 ಲಘು + 1 ಅನುದ್ರುತ + 1 ದ್ರುತ<br>= 7 + 1 + 2<br>= 10 | 2 |
| 24. | ಬಸವಣ್ಣನವರು ತಮ್ಮ ವಚನಗಳ ಕೊನೆಯಲ್ಲಿ 'ಕೂಡಲ ಸಂಗಮದೇವ'ನನ್ನು ಸ್ಮರಿಸಲು ಕಾರಣವೇನು ?<br>***ಉತ್ತರ :***<br>ಬಸವಣ್ಣನವರ ಆರಾಧ್ಯದೈವ 'ಕೂಡಲಸಂಗಮದೇವ'. ಆದ್ದರಿಂದ ಅವರು ತಮ್ಮ ವಚನಗಳ ಕೊನೆಯಲ್ಲಿ 'ಕೂಡಲಸಂಗಮದೇವ'ನನ್ನು ನೆನೆಯುತ್ತಾರೆ. | 2 |
| 25. | ರಿಷಭ ಸ್ವರ ಪ್ರಭೇದಗಳು ಗಾಂಧಾರ ಸ್ವರ ಪ್ರಭೇದಗಳಿಗಿಂತ ಹೇಗೆ ಭಿನ್ನವಾಗಿವೆ ?<br>***ಉತ್ತರ :***<br>*ರಿಷಭ ಸ್ವರ ಪ್ರಭೇದಗಳು :*<br>$ರಿ_1$ = ಶುದ್ಧ ರಿಷಭ<br>$ರಿ_2$ = ಚತುಶ್ರುತಿ ರಿಷಭ<br>$ರಿ_3$ = ಷಟ್‌ಶ್ರುತಿ ರಿಷಭ<br>*ಗಾಂಧಾರ ಸ್ವರ ಪ್ರಭೇದಗಳು :*<br>$ಗ_1$ = ಶುದ್ಧ ಗಾಂಧಾರ<br>$ಗ_2$ = ಸಾಧಾರಣ ಗಾಂಧಾರ<br>$ಗ_3$ = ಅಂತರ ಗಾಂಧಾರ<br>ಹೀಗೆ ಪ್ರಭೇದಗಳು ವಿಭಿನ್ನವಾಗಿರುವುದರಿಂದ ರಿಷಭ ಸ್ವರ ಪ್ರಭೇದಗಳು ಗಾಂಧಾರ ಸ್ವರ ಪ್ರಭೇದಗಳಿಗಿಂತ ಭಿನ್ನವಾಗಿವೆ. ಕಂಪನಾಂಕಗಳಲ್ಲೂ ಭಿನ್ನತೆ ಇದೆ. | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಈ ಕೆಳಗಿನ ಅಂಕಿತಗಳನ್ನು ಆಯಾ ರಚನಕಾರರ ಹೆಸರುಗಳೊಂದಿಗೆ ವಿಂಗಡಿಸಿ ಬರೆಯಿರಿ :<br>ಗುರುಗುಹ, ಶ್ಯಾಮಕೃಷ್ಣ, ಕಾಗಿನೆಲೆಯಾದಿಕೇಶವ, ಚೆನ್ನಮಲ್ಲಿಕಾರ್ಜುನ.<br>***ಉತ್ತರ :***<br>ಗುರುಗುಹ — ಮುತ್ತುಸ್ವಾಮಿ ದೀಕ್ಷಿತರು<br>ಶ್ಯಾಮಕೃಷ್ಣ — ಶ್ಯಾಮಾಶಾಸ್ತ್ರಿಗಳು<br>ಕಾಗಿನೆಲೆಯಾದಿಕೇಶವ — ಕನಕದಾಸರು<br>ಚೆನ್ನಮಲ್ಲಿಕಾರ್ಜುನ — ಅಕ್ಕಮಹಾದೇವಿ | 2 |
| 27. | ಔಡವ ರಾಗವು ಷಾಡವ ರಾಗಕ್ಕಿಂತ ಹೇಗೆ ಭಿನ್ನವಾಗಿದೆ ?<br>***ಉತ್ತರ :***<br>ಔಡವ ರಾಗದ ಆರೋಹಣ ಅವರೋಹಣಗಳು ಐದೈದು ಸ್ವರಗಳನ್ನು ಹೊಂದಿವೆ.<br>ಷಾಡವ ರಾಗದ ಆರೋಹಣ ಅವರೋಹಣಗಳು ಆರು ಆರು ಸ್ವರಗಳನ್ನು ಹೊಂದಿವೆ.<br>ಹೀಗಾಗಿ ಔಡವ ರಾಗವು ಷಾಡವ ರಾಗಕ್ಕಿಂತ ಭಿನ್ನವಾಗಿದೆ. | 2 |
| 28. | ಮಾಯಾಮಾಳವ ಗೌಳ ಹಾಗೂ ಕಾಮವರ್ಧಿನಿ ರಾಗಗಳ ನಡುವಿನ ಒಂದು ಸಾಮ್ಯತೆ ಮತ್ತು ಒಂದು ವ್ಯತ್ಯಾಸವನ್ನು ಬರೆಯಿರಿ.<br>***ಉತ್ತರ :***<br>***ಸಾಮ್ಯತೆ:*** ಮಾಯಾಮಾಳವ ಗೌಳ ಮತ್ತು ಕಾಮವರ್ಧಿನಿ ಎರಡೂ ರಾಗಗಳು ಅಥವಾ ಸಂಪೂರ್ಣ ರಾಗಗಳು ಮಧ್ಯಮ ಸ್ವರವೊಂದನ್ನು ಹೊರತುಪಡಿಸಿ ಮಿಕ್ಕೆಲ್ಲ ಸ್ವರಗಳುಎರಡೂ ರಾಗದಲ್ಲಿ ಒಂದೇ ಆಗಿದೆ.<br>***ವ್ಯತ್ಯಾಸ :*** ಮಾಯಾಮಾಳವಗೌಳವು ಶುದ್ಧ ಮಧ್ಯಮ ರಾಗವಾದರೆ ಕಾಮವರ್ಧಿನಿಯು ಪ್ರತಿಮಧ್ಯಮ ರಾಗವಾಗಿದೆ.<br>ಮಾಯಾಮಾಳವಗೌಳವು 15ನೇ ಮೇಳಕರ್ತವಾದರೆ ಕಾಮವರ್ಧಿನಿಯು 51ನೇ ಮೇಳಕರ್ತವಾಗಿದೆ. | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಈ ಕೆಳಗಿನ ಸಂಗೀತ ವಾದ್ಯಗಳನ್ನು ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತ ವಾದ್ಯಗಳಾಗಿ ವಿಂಗಡಿಸಿ ಬರೆಯಿರಿ :<br>ವೀಣೆ, ಸಿತಾರ್, ನಾದಸ್ವರ, ಕ್ಲಾರಿಯೋನೆಟ್, ಕೊಳಲು, ಸಾರಂಗಿ, ಸಂತೂರ್, ಹಾರ್ಮೋನಿಯಂ.<br>***ಉತ್ತರ :*** | |

| ***ಕರ್ನಾಟಕ ಸಂಗೀತ*** | ***ಹಿಂದೂಸ್ಥಾನಿ ಸಂಗೀತ*** |
|---|---|
| ವೀಣೆ | ಸಿತಾರ್ |
| ನಾದಸ್ವರ | ಸಾರಂಗಿ |
| ಕ್ಲಾರಿಯೋನೆಟ್ | ಸಂತೂರ್ |
| ಕೊಳಲು | ಹಾರ್ಮೋನಿಯಂ |

2

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

30. ಸಂಗೀತ ವಾದ್ಯಗಳ ವರ್ಗೀಕರಣವನ್ನು ಒಂದೊಂದು ಉದಾಹರಣೆಯೊಂದಿಗೆ ವಿವರಿಸಿ.

***ಉತ್ತರ :***

ಸಂಗೀತ ವಾದ್ಯಗಳನ್ನು ಬಹುಮುಖ್ಯವಾಗಿ ನಾಲ್ಕು ವಿಭಾಗಗಳಾಗಿ ಮಾಡಲಾಗಿದೆ.

ಅವುಗಳೆಂದರೆ, ತತ, ಸುಷಿರ, ಅವನದ್ಧ ಮತ್ತು ಘನ

1. ***ತತ ವಾದ್ಯಗಳು :*** ತಂತಿಯಿಂದ ಕೂಡಿರುವ, ತಂತಿಯಿಂದ ನಾದೋತ್ಪತ್ತಿ ಮಾಡುವ ವಾದ್ಯಗಳನ್ನು ತತ ವಾದ್ಯಗಳೆನ್ನುವರು.

   ***ಉದಾ. :*** ಪಿಟೀಲು, ವೀಣೆ, ಗಿಟಾರ್, ಸಿತಾರ್ ಮುಂತಾದವು.

2. ***ಸುಷಿರ ವಾದ್ಯಗಳು :*** ಗಾಳಿಯಿಂದ ನಾದೋತ್ಪತ್ತಿ ಮಾಡುವ ವಾದ್ಯಗಳನ್ನು ಸುಷಿರ ವಾದ್ಯಗಳೆನ್ನುವರು.

   ***ಉದಾ. :*** ಹಾರ್ಮೋನಿಯಂ, ಕೊಳಲು, ನಾದಸ್ವರ, ಕ್ಲಾರಿಯೋನೆಟ್ ಮುಂತಾದವು.

3. ***ಅವನದ್ಧ ವಾದ್ಯಗಳು :*** ಚರ್ಮದಿಂದ ಎಳೆದು ಕಟ್ಟಿ ಮಾಡಿರುವ ವಾದ್ಯಗಳು ಅವನದ್ಧ ವಾದ್ಯಗಳು ಇವು ಬಹುತೇಕ ತಾಳವಾದ್ಯಗಳಾಗಿವೆ.

   ***ಉದಾ. :*** ತಬಲ, ಮೃದಂಗ, ಡೋಲಕ್, ಡೋಲು, ತಮಟೆ ಮುಂತಾದವು.

4. ***ಘನ ವಾದ್ಯಗಳು :*** ಲೋಹ ಅಥವಾ ಮಣ್ಣಿನಿಂದ ತಯಾರಿಸಿದ ವಾದ್ಯಗಳನ್ನು ಘನವಾದ್ಯಗಳೆಂದು ಕರೆಯುವರು. ಇವು ಬಹುತೇಕ ತಾಳವಾದ್ಯಗಳಾಗಿವೆ.

   ***ಉದಾ. :*** ಘಟ, ಕಂಚಿನತಾಳ, ಮೋರ್ಚಿಂಗ್ ಮುಂತಾದವು.

7

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31 | ಚತುರಶ್ರಜಾತಿ ರೂಪಕತಾಳದ ಅಲಂಕಾರವನ್ನು ಸ್ವರಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ. | |
| | ***ಉತ್ತರ :*** | |
| | ತಾಳ : ಚತುರಶ್ರ ಜಾತಿ ರೂಪಕ ತಾಳ | |
| | ತಾಳಾಂಗ : 1 ದ್ರುತ, 1 ಲಘು | |
| | ಚಿಹ್ನೆ : O $\|_4$ | |
| | ಅಕ್ಷರಗಳು : 2 + 4 = 6 | |
| | O \| | |
| | \|\| ಸ ರಿ \| ಸ ರಿ ಗ ಮ \|\| | |
| | \|\| ರಿ ಗ \| ರಿ ಗ ಮ ಪ \|\| | |
| | \|\| ಗ ಮ \| ಗ ಮ ಪ ದ \|\| | |
| | \|\| ಮ ಪ \| ಮ ಪ ದ ನಿ \|\| | |
| | \|\| ಪ ದ \| ಪ ದ ನಿ ಸಂ \|\| | |
| | \|\| ಸಂ ನಿ \| ಸಂ ನಿ ದ ಪ \|\| | |
| | \|\| ನಿ ದ \| ನಿ ದ ಪ ಮ \|\| | |
| | \|\| ದ ಪ \| ದ ಪ ಮ ಗ \|\| | |
| | \|\| ಪ ಮ \| ಪ ಮ ಗ ರಿ \|\| | |
| | \|\| ಮ ಗ \| ಮ ಗ ರಿ ಸ \|\| | 5 |
| | **(ಹಿಂದೂಸ್ಥಾನಿ ಸಂಗೀತ)** | |
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 10 × 1 = 10 | |
| 1. | ಸ್ವರಗಳ ಏರಿಕೆ ಕ್ರಮವೇ | |
| | (A) ಆರೋಹಣ (B) ಅವರೋಹಣ | |
| | (C) ಶೃತಿ (D) ನಾದ | |
| | ***ಉತ್ತರ :*** (A) ಆರೋಹಣ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಪಂ. ಬಸವರಾಜ ರಾಜಗುರುರವರ ಜನ್ಮಸ್ಥಳ<br>(A) ಮನಸೂರು (B) ಯಲಿವಾಳ<br>(C) ಕುರಂದವಾಡ (D) ಪುರಂದರಗಡ<br>***ಉತ್ತರ :*** (B) ಯಲಿವಾಳ | 1 |
| 3. | ಹಿಂದೂಸ್ಥಾನಿ ಸಂಗೀತವನ್ನು 'ಉತ್ತರಾದಿ ಸಂಗೀತ' ಎಂದು ಕರೆಯುವರು. ಏಕೆಂದರೆ, ಈ ಸಂಗೀತ ಪ್ರಕಾರವು<br>(A) ದಕ್ಷಿಣ ಭಾರತದಲ್ಲಿ ಬೆಳೆದು ಬಂತು<br>(B) ಉತ್ತರ ಭಾರತದಲ್ಲಿ ಬೆಳೆದು ಬಂತು<br>(C) ಕರ್ನಾಟಕದಲ್ಲಿ ಬೆಳೆದು ಬಂತು<br>(D) ಪ್ರಪಂಚದ ದಕ್ಷಿಣ ಭಾಗದಲ್ಲಿ ಬೆಳೆದು ಬಂತು<br>***ಉತ್ತರ :*** (B) ಉತ್ತರ ಭಾರತದಲ್ಲಿ ಬೆಳೆದು ಬಂತು | 1 |
| 4. | 'ಗಂಧರ್ವ ವೇದ' ಎಂದು ಕರೆಯಲ್ಪಡುವ ಕಲೆ<br>(A) ಸಂಗೀತ (B) ನಾಟಕ<br>(C) ವಾಸ್ತುಶಿಲ್ಪ (D) ಚಿತ್ರಕಲೆ<br>***ಉತ್ತರ :*** (A) ಸಂಗೀತ | 1 |
| 5. | ಭೈರವಿ ರಾಗವನ್ನು 'ಸಂಪೂರ್ಣರಾಗ' ಎಂದು ಕರೆಯುವರು. ಏಕೆಂದರೆ, ಈ ರಾಗದಲ್ಲಿ<br>(A) ಐದು–ಐದು ಸ್ವರಗಳಿವೆ (B) ಐದು–ಏಳು ಸ್ವರಗಳಿವೆ<br>(C) ಆರು–ಏಳು ಸ್ವರಗಳಿವೆ (D) ಏಳು–ಏಳು ಸ್ವರಗಳಿವೆ<br>***ಉತ್ತರ :*** (D) ಏಳು–ಏಳು ಸ್ವರಗಳಿವೆ | 1 |
| 6. | ಏಳು ಸ್ವರಗಳ ಸಮೂಹವೇ<br>(A) ಮುಖ್ಯಾಂಗ (B) ಸಪ್ತಕ<br>(C) ವಾದಿಸ್ವರ (D) ಪೂರ್ವಾಂಗ ಸ್ವರ<br>***ಉತ್ತರ :*** (B) ಸಪ್ತಕ | 1 |
| 7. | ಜೀವನ್‌ಪುರಿ ರಾಗದ ಗ, ಧ, ನಿ ಸ್ವರಗಳ ಕೆಳಗೆ ಅಡ್ಡಗೆರೆ ಕೊಡಲಾಗುವುದು. ಏಕೆಂದರೆ, ಅವು<br>(A) ಶುದ್ಧ ಸ್ವರಗಳು (B) ತೀವ್ರ ಸ್ವರಗಳು<br>(C) ಕೋಮಲ ಸ್ವರಗಳು (D) ವರ್ಜ್ಯ ಸ್ವರಗಳು<br>***ಉತ್ತರ :*** (C) ಕೋಮಲ ಸ್ವರಗಳು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | 'ಸಿತಾರ್' ಅನ್ನು 'ತತ್ ವಾದ್ಯ' ಎಂದು ಕರೆಯುವರು. ಏಕೆಂದರೆ, ಅದು<br>(A) ಮರದಿಂದ ಮಾಡಲ್ಪಟ್ಟಿದೆ<br>(B) ಹಿಂದೂಸ್ಥಾನಿ ಸಂಗೀತ ವಾದ್ಯವಾಗಿದೆ<br>(C) ಲೋಹ ವಾದ್ಯವಾಗಿದೆ<br>(D) ತಂತಿಗಳಿಂದ ನಾದೋತ್ಪತ್ತಿ ಮಾಡುತ್ತದೆ<br>***ಉತ್ತರ :*** (D) ತಂತಿಗಳಿಂದ ನಾದೋತ್ಪತ್ತಿ ಮಾಡುತ್ತದೆ | 1 |
| 9. | ಸ್ವರಲಿಪಿಯಲ್ಲಿ ಸ್ವರದ ಕೆಳಗೆ ಒಂದು ಬಿಂದು ಕೊಡಲಾಗುವುದು. ಏಕೆಂದರೆ, ಅದು<br>(A) ಮಧ್ಯ ಸಪ್ತಕದ ಸ್ವರವಾಗಿರುತ್ತದೆ<br>(B) ಮಂದ್ರ ಸಪ್ತಕದ ಸ್ವರವಾಗಿರುತ್ತದೆ<br>(C) ತಾರಾ ಸಪ್ತಕದ ಸ್ವರವಾಗಿರುತ್ತದೆ<br>(D) ಅನುಮಂದ್ರ ಸಪ್ತಕದ ಸ್ವರವಾಗಿರುತ್ತದೆ<br>***ಉತ್ತರ :*** (B) ಮಂದ್ರ ಸಪ್ತಕದ ಸ್ವರವಾಗಿರುತ್ತದೆ | 1 |
| 10. | ಹಿಂದೂಸ್ಥಾನಿ ಸಂಗೀತ ಪದ್ಧತಿಯ ಗೇಯ ಪ್ರಕಾರಗಳಾದ ಧ್ರುಪದ್, ಖಯಾಲ್ ಠುಮ್ರಿಯ ಪ್ರಾರಂಭಿಕ ಸಾಲುಗಳೇ<br>(A) ಸ್ಥಾಯಿ (B) ಅಂತರಾ<br>(C) ಸಂಚಾರಿ (D) ಆಭೋಗ<br>***ಉತ್ತರ :*** (A) ಸ್ಥಾಯಿ | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $10 \times 1 = 10$ | |
| 11. | ಝಪ್ತಾಳದಲ್ಲಿ ಎಷ್ಟು ಮಾತ್ರೆಗಳಿವೆ ?<br>***ಉತ್ತರ :***<br>ಝಪ್ತಾಳದಲ್ಲಿ ಹತ್ತು ಮಾತ್ರೆಗಳಿವೆ. | 1 |
| 12. | ಭೈರವ್ ರಾಗವನ್ನು 'ಉತ್ತರಾಂಗ ಪ್ರಧಾನರಾಗ' ಎಂದು ಕರೆಯುವರು. ಏಕೆ ?<br>***ಉತ್ತರ :***<br>ಭೈರವ್ ರಾಗದ ವಾದಿಸ್ವರ ಕೋಮಲ ಧೈವತವು ಉತ್ತರಾಂಗದ ಸ್ವರವಾಗಿದೆ. | 1 |
| 13. | ಖಯಾಲ್ ಅರ್ಥವನ್ನು ವ್ಯಾಖ್ಯಾನಿಸಿ.<br>***ಉತ್ತರ :***<br>ಖಯಾಲ್ ಯೋಚಿಸು, ಕಲ್ಪಿಸು, ವಿಚಾರಿಸು ಎಂಬ ಅರ್ಥವನ್ನು ಕೊಡುತ್ತದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಪಂಡಿತ್ ಪಂಚಾಕ್ಷರಿ ಗವಾಯಿಗಳನ್ನು 'ಉಭಯ ಗಾಯನಾಚಾರ್ಯ' ಎಂದು ಕರೆಯಲು ಕಾರಣವೇನು ?<br>***ಉತ್ತರ :***<br>ಪಂಡಿತ್ ಪಂಚಾಕ್ಷರಿ ಗವಾಯಿಗಳು ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದ ಎರಡು ಪದ್ಧತಿಗಳಲ್ಲಿ ಪಾಂಡಿತ್ಯ ಪಡೆದಿದ್ದರು. | 1 |
| 15. | ಪಂಡಿತ್ ಮಲ್ಲಿಕಾರ್ಜುನ ಮನಸೂರರಿಗೆ ಭಾರತ ಸರ್ಕಾರ ನೀಡಿದ ಎರಡು ಪ್ರಶಸ್ತಿಗಳನ್ನು ಹೆಸರಿಸಿ.<br>***ಉತ್ತರ :***<br>ಪಂಡಿತ್ ಮಲ್ಲಿಕಾರ್ಜುನ ಮನಸೂರರಿಗೆ ಭಾರತ ಸರ್ಕಾರವು ಪದ್ಮಶ್ರೀ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಿತು. | 1 |
| 16. | ದುರ್ಗಾ ರಾಗವನ್ನು ಔಡವ–ಔಡವ ರಾಗ ಎಂದು ಕರೆಯಲು ಕಾರಣವೇನು ?<br>***ಉತ್ತರ :***<br>ದುರ್ಗಾ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಐದೈದು ಸ್ವರಗಳಿವೆ. | 1 |
| 17. | ದೇಸ್ ರಾಗದ ವಾದಿ ಸ್ವರವನ್ನು ಹೆಸರಿಸಿ.<br>***ಉತ್ತರ :***<br>ದೇಸ್ ರಾಗದ ವಾದಿ ಸ್ವರವು ಶುದ್ಧ ರಿಷಭವಾಗಿದೆ. | 1 |
| 18. | ಪಂಡಿತ್ ವಿಷ್ಣು ದಿಗಂಬರ ಫಲುಸ್ಕರ್‌ರವರು ಕುರುಡರಾಗಲು ಕಾರಣವೇನು ?<br>***ಉತ್ತರ :***<br>ಪಂಡಿತ್ ವಿಷ್ಣು ದಿಗಂಬರ ಫಲುಸ್ಕರ್‌ರವರು ಪಟಾಕಿಯ ಸಿಡಿಮದ್ದಿನ ಸ್ಫೋಟದಿಂದ ದೃಷ್ಟಿಹೀನರಾದರು. | 1 |
| 19. | ಬಸವಣ್ಣನವರ ಅಂಕಿತನಾಮವನ್ನು ಹೆಸರಿಸಿ.<br>***ಉತ್ತರ :***<br>ಬಸವಣ್ಣನವರ ಅಂಕಿತನಾಮ ಕೂಡಲಸಂಗಮದೇವಾ. | 1 |
| 20. | ತಾನ್ ಮತ್ತು ತಾನ್ ಸ್ವರ ಮಾಲಿಕಾಗಳಿಗಿರುವ ಒಂದು ವ್ಯತ್ಯಾಸ ತಿಳಿಸಿ.<br>***ಉತ್ತರ :***<br>ಯಾವುದೇ ರಾಗದ ಸ್ವರ ಸಮೂಹಗಳನ್ನು ಧೃತ್‌ಲಯದಲ್ಲಿ ಹಾಡುವುದು ತಾನ್ ಸ್ವರಮಾಲಿಕ ಆದರೆ, ಆ ಸ್ವರ ಮೂಹಗಳನ್ನು 'ಅ'ಕಾರದಲ್ಲಿ ಹಾಡುವುದು ತಾನ್ ಆಗಿದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | **ಈ ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ :** $9 \times 2 = 18$ | |
| 21. | ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದಲ್ಲಿ ಕಂಡುಬರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ. | |
| | ***ಉತ್ತರ :*** | |

| ***ಕರ್ನಾಟಕ ಸಂಗೀತ*** | ***ಹಿಂದೂಸ್ಥಾನಿ ಸಂಗೀತ*** |
|---|---|
| 1. ಒಂದು ಸಪ್ತಕದಲ್ಲಿ 16 ಸ್ವರಗಳಿವೆ. | 1. ಒಂದು ಸಪ್ತಕದಲ್ಲಿ 12 ಸ್ವರಗಳಿವೆ. |
| 2. ರಾಗ ವಿಭಜನೆಯಲ್ಲಿ ಜನಕ ಮತ್ತು ಜನ್ಯರಾಗ ಪದ್ಧತಿಯನ್ನು ಹೊಂದಿದೆ. | 2. ರಾಗ ವಿಭಜನೆಯಲ್ಲಿ ಥಾಟ್ ಮತ್ತು ರಾಗರಾಗಿಣಿ ಪದ್ಧತಿಯನ್ನು ಹೊಂದಿದೆ. |
| 3. ಸುಳಾದಿ ಸಪ್ತತಾಳಗಳು ಮತ್ತು ಛಾಪು ತಾಳಗಳು ರೂಢಿಯಲ್ಲಿದೆ. | 3. ತ್ರಿತಾಲ್, ಚೌತಾಲ್, ಝುಪ್ತಾಲ್, ದಾದರಾ, ಧೃತ್ ಏಕತಾಲ್ ಮುಂತಾದವು ರೂಢಿಯಲ್ಲಿದೆ. |
| 4. ತಾಳಗಳನ್ನು ಕ್ರಿಯೆಯ ಮೂಲಕ ಎಣಿಸಿ ತೋರಿಸಲಾಗುತ್ತದೆ. | 4. ತಾಳದ ಎಣಿಕೆಯನ್ನು ತಬಲಾ ಸಾಥಿಯ ಮೂಲಕ ನಿರ್ವಹಿಸಲಾಗುತ್ತದೆ. |
| 5. ಸಂಗೀತ ರಚನೆಗಳಲ್ಲಿ ಗೀತೆ, ಕೃತಿ ಜತಿಸ್ವರ, ಕೀರ್ತನೆ, ಜಾವಳಿ, ತಿಲ್ಲಾನ ಮುಂತಾದ ರಚನೆಗಳಿವೆ. | 5. ಸಂಗೀತ ರಚನೆಗಳಲ್ಲಿ ಧ್ರುಪದ್ ಧಮಾರ್, ತರಾನಾ, ಖ್ಯಾಲ್, ಠುಮ್ರಿ ಭಜನ್ ಮುಂತಾದ ರಚನೆಗಳಿವೆ. |
| 6. ವೀಣೆ, ಪಿಟೀಲು, ಕೊಳಲು, ನಾಗಸ್ವರ ಮೃದಂಗ, ಡೋಲು, ಡೋಲಕ್, ಘಟ ಮುಂತಾದ ಸಂಗೀತ ವಾದ್ಯಗಳು ರೂಢಿಯಲ್ಲಿವೆ. | 6. ಸಿತಾರ್, ಬೀನ್, ಸರೋದ್, ಸಾರಂಗಿ, ಸಂತೂರ್, ಶಹನಾಯ್, ಬಾನ್ಸುರಿ, ತಬಲಾ, ಪಖವಾಜ್ ಮುಂತಾದ ಸಂಗೀತ ವಾದ್ಯಗಳು ಬಳಕೆಯಲ್ಲಿವೆ. |

| | | |
|---|---|---|
| | | 2 |
| 22. | 'ಶಹನಾಯ್' ವಾದ್ಯವನ್ನು ಸುಷಿರವಾದ್ಯ ಎಂದು ಕರೆಯುವರು. ಏಕೆ ? | |
| | ***ಉತ್ತರ :*** | |
| | ಶಹನಾಯ್ ಒಂದು ಸುಷಿರ ವಾದ್ಯ. ಈ ವಾದ್ಯದಲ್ಲಿ ಗಾಳಿಯ ಸಹಾಯದಿಂದ ಸಂಗೀತೋಪಯೋಗಿ ಸ್ವರೋತ್ಪತ್ತಿಯನ್ನುಂಟು ಮಾಡಲಾಗುತ್ತದೆ. ಆದ್ದರಿಂದಲೇ ಈ ವಾದ್ಯವನ್ನು 'ಸುಷಿರ ವಾದ್ಯ' ಎಂದು ಕರೆಯುವರು. | 2 |
| 23. | ಶೃತಿಗೊಳಿಸಿದ ತಂಬೂರಿಯು ಆಹತನಾದವನ್ನು ಉಂಟುಮಾಡುತ್ತದೆ. ಹೇಗೆ ? | |
| | ***ಉತ್ತರ :*** | |
| | ಶೃತಿಗೊಳಿಸಿದ ತಂಬೂರಿಯಲ್ಲಿ ಸ್ವರಗಳು ನಿಯಮಿತ ಕಂಪನಗಳಿಂದ ಉಂಟಾಗುತ್ತದೆ. ಅದು ಆಹತ ನಾದವೇ ಆಗಿರುತ್ತದೆ. | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

24. ಸಂಗೀತವನ್ನು 'ಶ್ರವಣ ಸಾಧನ ವಿದ್ಯೆ' ಎಂದು ಕರೆಯುವರು. ಏಕೆ ?

***ಉತ್ತರ :***

ಸಂಗೀತದ ಕಲಿಕಾರ್ಥಿಗಳ ಪ್ರಾರಂಭಿಕ ಕೌಶಲವೇ ಆಲಿಸುವಿಕೆ. ಕಲಿಕಾರ್ಥಿ ಸಂಗೀತದ ಸ್ವರಗಳನ್ನು ಕೇವಲ ಶ್ರವಣೇಂದ್ರಿಯಗಳಿಂದ ಮಾತ್ರ ಗ್ರಹಿಸಬಹುದು. ಸಂಗೀತದಲ್ಲಿರುವ ಸೂಕ್ಷ್ಮ ಸ್ವರಗಳ ಗ್ರಹಿಕೆಯು ಕೂಡ ಆಲಿಸುವಿಕೆಗೆ ಸಂಬಂಧಿಸಿರುವುದರಿಂದ ಸಂಗೀತವನ್ನು 'ಶ್ರವಣ ಸಾಧನ ವಿದ್ಯೆ' ಎಂದು ಕರೆಯುವರು. 2

25. ಈ ಕೆಳಗಿನ ವಾದ್ಯಗಳನ್ನು ಅವನದ್ಧ ಮತ್ತು ಘನವಾದ್ಯಗಳಾಗಿ ವರ್ಗೀಕರಣ ಮಾಡಿ ಬರೆಯಿರಿ.

ತಬಲ, ಕರತಾಳ, ಜಲತರಂಗ, ಫಕವಾಜ್.

***ಉತ್ತರ :***

| **ಅವನದ್ಧ ವಾದ್ಯಗಳು** | **ಘನ ವಾದ್ಯಗಳು** |
|---|---|
| ತಬಲ | ಕರತಾಳ |
| ಪಖವಾಜ್ | ಜಲತರಂಗ್ |

2

26. ಸಂಗೀತಕ್ಕೆ ಲಿಪಿಯ ಅಗತ್ಯತೆ ಇದೆ. ಏಕೆ ?

***ಉತ್ತರ :***

ಸಂಗೀತವು ಕೂಡ ಒಂದು ಭಾಷೆ. ಇಲ್ಲಿ ಬೇರೆ ಬೇರೆ ಸ್ವರ, ರಾಗ ಮತ್ತು ತಾಳಗಳಿವೆ. ಇವುಗಳನ್ನು ಗುರುತಿಸಬೇಕಾದರೆ ಸ್ವರ ಸಂಖ್ಯೆ, ಸ್ವರ ಚಿಹ್ನೆ ಸ್ವರ ಸಂಕೇತ, ತಾಳ ಮತ್ತು ತಾಳ ಚಿಹ್ನೆಗಳ ಅಗತ್ಯತೆ ಇದೆ. ಹಾಗೆಯೇ ಮುಂದಿನ ಪೀಳಿಗೆಗೆ ಸಂಗೀತವನ್ನು ಉಳಿಸಿಡಬೇಕಾದರೆ ಸಂಗೀತಕ್ಕೆ ಲಿಪಿಯ ಅಗತ್ಯತೆ ಇದೆ. 2

27. ಈ ಕೆಳಗಿನ ತಾಳಗಳನ್ನು ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತ ತಾಳಗಳಾಗಿ ವರ್ಗೀಕರಿಸಿ ಬರೆಯಿರಿ :

ದಾದರಾ, ಆದಿತಾಳ, ಭಜನ್ ಠೇಕಾ, ತ್ರಿಪುಟತಾಳ.

***ಉತ್ತರ :***

| ***ಕರ್ನಾಟಕ ಸಂಗೀತ ತಾಳಗಳು*** | ***ಹಿಂದೂಸ್ಥಾನಿ ಸಂಗೀತ ತಾಳಗಳು*** |
|---|---|
| ಆದಿತಾಳ | ದಾದರಾ |
| ತ್ರಿಪುಟತಾಳ | ಭಜನ್ ಠೇಕಾ |

2

28. ದೇಸ್ ಮತ್ತು ಬೃಂದಾವನಿ ಸಾರಂಗ ರಾಗಗಳಲ್ಲಿ ಕಂಡುಬರುವ ಎರಡು ಸಾಮ್ಯತೆಗಳನ್ನು ಬರೆಯಿರಿ.

***ಉತ್ತರ :***

1) ಎರಡು ರಾಗಗಳಲ್ಲಿ ವಾದಿ ಸ್ವರ ಶುದ್ಧ ರಿಷಭ ಮತ್ತು ಸಂವಾದಿ ಸ್ವರ ಪಂಚಮವಾಗಿದೆ.
2) ಎರಡು ರಾಗಗಳಲ್ಲಿ ಶುದ್ಧ ನಿಷಾದ ಮತ್ತು ಕೋಮಲ ನಿಷಾದದ ಬಳಕೆ ಇದೆ. 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಈ ಕೆಳಗೆ ಕೊಟ್ಟಿರುವ ರಾಗಗಳಲ್ಲಿ ಥಾಟ್ ರಾಗ ಮತ್ತು ಔಡವ ಸಂಪೂರ್ಣ ರಾಗಗಳಾಗಿ ವರ್ಗೀಕರಿಸಿ ಬರೆಯಿರಿ : ಬಿಲಾವಲ್, ದೇಸ್, ಅಸಾವರಿ, ಬಿಹಾಗ್ | |

***ಉತ್ತರ :***

| ***ಥಾಟ್ ರಾಗಗಳು*** | ***ಔಡವ ಸಂಪೂರ್ಣ ರಾಗಗಳು*** |
|---|---|
| ಬಿಲಾವಲ್ | ದೇಸ್ |
| ಅಸಾವರಿ | ಬಿಹಾಗ್ |

2

IV. **ಸಂಕ್ಷಿಪ್ತವಾಗಿ ಉತ್ತರಿಸುವುದು :**

30. ತೀನ್‌ತಾಳ ಮತ್ತು ಚೌತಾಳ ಒಂದಕ್ಕೊಂದು ಭಿನ್ನ. ಹೇಗೆ ? ವಿವರಿಸಿ. ಈ ಎರಡು ತಾಳಗಳ ಮಾಹಿತಿಯನ್ನು ಠೇಕಾದೊಂದಿಗೆ ಬರೆಯಿರಿ.

***ಉತ್ತರ :***

ತೀನ್ ತಾಳವು ಬಂದ್ ಬಾಜ್‌ನಲ್ಲಿ ನುಡಿಸುವ ತಾಳವಾಗಿದೆ. ವಿಲಂಬಿತ್ ತೀನ್‌ತಾಳದಲ್ಲಿ ವಿಲಂಬಿತ ಖ್ಯಾಲನ್ನೂ, ಧೃತ್ ತೀನ್ ತಾಳದಲ್ಲಿ ಛೋಟಾ ಖ್ಯಾಲನ್ನು ಹಾಡಲಾಗುತ್ತದೆ. ಅಷ್ಟೇ ಅಲ್ಲದೆ ಆಧುನಿಕ ಕಾಲದಲ್ಲಿ ಸುಗಮ ಸಂಗೀತ, ಲಘು ಸಂಗೀತ, ಭಜನಾ ಸಂಗೀತ, ಚಲನ ಚಿತ್ರ ಸಂಗೀತಗಳಲ್ಲಿಯು ಈ ತಾಳವನ್ನು ಬಳಸುತ್ತಾರೆ. ಆದರೆ ಚೌತಾಳವನ್ನು ಖುಲ್ಲಾ ಬಾಜ್‌ನಲ್ಲಿ ನುಡಿಸುತ್ತಾರೆ. ಈ ತಾಳವನ್ನು ಧ್ರುಪದ್ ಗಾಯನಕ್ಕೆ ಬಳಸುವುದರಿಂದ ಇದನ್ನು 'ಧ್ರುಪದ್' ಎಂದೂ ಸಹ ಕರೆಯುವರು. ಈ ಎಲ್ಲಾ ಅಂಶಗಳಿಂದ ತೀನ್‌ತಾಳ ಮತ್ತು ಚೌತಾಳ ಒಂದಕ್ಕೊಂದು ಭಿನ್ನ ಎಂಬುವುದನ್ನು ತಿಳಿಯಬಹುದಾಗಿದೆ.

***ತೀನ್‌ತಾಳದ ಮಾಹಿತಿ :***

ಮಾತ್ರೆಗಳು – 16

ಭಾಗ – 04, ( 4, 4, 4, 4 ರಂತೆ )

ಪೆಟ್ಟು – 03 ( 1, 5, 13 ನೇ ಮಾತ್ರೆಯ ಮೇಲೆ )

ಹುಸಿ – 01 ( 9ನೇ ಮಾತ್ರೆಯ ಮೇಲೆ )

***ಠೇಕಾ :***

| × | | | | × | | | | 0 | | | | × | | | |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| ಧಾ | ಧಿನ್ | ಧಿನ್ | ಧಾ | ಧಾ | ಧಿನ್ | ಧಿನ್ | ಧಾ | ಧಾ | ತಿನ್ | ತಿನ್ | ತಾ | ತ್ರಕ | ಧಿನ್ | ಧಿನ್ | ಧಾ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

***ಚೌತಾಳದ ಮಾಹಿತಿ :***

ಮಾತ್ರೆಗಳು – 12

ಭಾಗ – 06 (2, 2, 2, 2, 2, 2)

ಪೆಟ್ಟು – 04 (1, 5, 9, 11 ನೇ ಮಾತ್ರೆಯ ಮೇಲೆ)

ಹುಸಿ – 02 (3, 7ನೇ ಮಾತ್ರೆಯ ಮೇಲೆ)

***ಠೇಕಾ :***

| × | | 0 | | × | | 0 | | × | | × | |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಧಾ | ಧಾ | ಧಿಂ | ಧಾ | ಕಿಟ | ಧಾ | ಧಿಂ | ಧಾ | ತಿಟಿ | ಕತ | ಗಧಿ | ಗನ |

7

31. ಬೃಂದಾವನಿ ಸಾರಂಗ ರಾಗದ ಸ್ವರಗೀತೆಯನ್ನು ಸ್ವರಲಿಪಿಬದ್ಧಗೊಳಿಸಿ.

***ಉತ್ತರ :***

ಬೃಂದಾವನಿ ಸಾರಂಗ ರಾಗದ ಸ್ವರಗೀತೆ

***ಸ್ಥಾಯಿ :***

| × | | | | × | | | | 0 | | | | × | | | |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | ಸ̇ | ಸ̇ | ನಿ̲ | ಪ | ಮ | ರಿ | ನ̣ಿ | ಸ |
| ರಿ | ರಿ | ಮ | ಮ | ಪ | ಪ | ನಿ̲ | ಪ | ನ̣ಿ | ಸ | ರಿ | ಮ | ರಿ | ಸ | ನ̣ಿ | ಸ |
| ರಿ | ಮ | ಪ | ನಿ̲ | ಪ | ಮ | ಪ | ನಿ | | | | | | | | |

***ಅಂತರಾ :***

| × | | | | × | | | | 0 | | | | × | | | |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | ಮ | ಮ | ರಿ | ಮ | ಪ | ಪ | ನಿ̲ | ಪ |
| ಮ | ಪ | ನಿ | ಸ̇ | ರಿ̇ | ನಿ | ಸ̇ | ಸ̇ | ನಿ | ಸ̇ | ರಿ̇ | ಮ̇ | ರಿ̇ | ಸ̇ | ನಿ | ಸ̇ |
| ರಿ̇ | ಸ | ನಿ | ಸ̇ | ನಿ̲ | ಪ | ಮ | ಪ | | | | | | | | |

5